ಬೆವಿಕಂ

BESCOM

# ಬೆಸ್ಕಾಂ ಸ್ನೇಹಿ

## ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗೃಹಪತ್ರಿಕೆ

ಸಂಪುಟ-5, ಸಂಚಿಕೆ-2 ತ್ರೈಮಾಸಿಕ, ಏಪ್ರಿಲ್ - ಜೂನ್ 2018 ಪುಟಗಳು-16



# ದಿನಾಂಕ 24-12-2017 ರಂದು ಬೆವಿಕಂನ ವತಿಯಿಂದ ಆಯೋಜಿಸಲಾಗಿದ್ದ ಪವರ್ ಮ್ಯಾರಥಾನ್


















# Message from Managing Director



As you are all aware that we are working towards providing best services to our consumers to realise our vision Statement of becoming No. 1 in Consumer Satisfaction in South Asia. We have launched the Fast Track New Connection Scheme "SAVI-KIRANA" for facilitating our consumers to avail New Connection up to 7.5 KW / Tariff Change / Name Change to be serviced within 24 Working Hours and can be applied both Online or Offline at our Consumer Friendly Help desks.

The Pendency Rates for the Services have drastically reduced; New Connections from 39% to 10%; Name Change 16% to 2% and the Tariff Change from 8% to almost Zero. I render my appreciations to our entire field Officers / Staff who are working for effective implementation of the scheme.

To minimise interruptions and to provide Quality Power Supply to consumers, we have already taken up the work of Network enhancement / augmentation works viz., providing LT AB Cable, commissioning of 5 Star rated Amorphous transformers, replacement of Overhead lines by UG Cable especially in rural areas etc. Installing Auto Re-closures for the industrial feeders as part of Ease of Doing Business. Planning to extend the Pre-Paid Metering for Street Light and Water Supply installations. Rolling out Advanced Metering Infrastructure along with Smart Meters across all Divisions which will enable Bi-Directional Communication between Grids to Consumers thereby providing automated Billing & Collection and also achieve our goal of Demand Supply Management (DSM).

I advise officers and staff to be well prepared to handle the Monsoon rains which is anticipated to start within next 2 months by having a detailed Sub-Division wise Plan of Action.

Further, the need of the hour is that all field Staff must make Collective Efforts to implement the Schemes / Projects for providing best Services to our Consumers.

**P. Rajendra Cholan**
Managing Director

# ಸಂಪಾದಕೀಯ



ಆತ್ಮೀಯರೆ,

ಪ್ರತಿವರ್ಷ ನಾವು ಬೇಸಿಗೆ ಆರಂಭವನ್ನು ಸಂತಸದಿಂದಲೇ ಸ್ವಾಗತಿಸುತ್ತೇವೆ. ಮಾರ್ಚ್ ತಿಂಗಳಲ್ಲಿಯೇ ಯುಗಾದಿ ಹಬ್ಬ ಬರುವುದರಿಂದ ಹಬ್ಬದ ಸಡಗರ ಸಂಭ್ರಮ ಎಲ್ಲರಲ್ಲಿಯೂ ಮನೆ ಮಾಡಿರುತ್ತದೆ.

ಮಾರ್ಚ್ ಆದಿಯಾಗಿ ನಂತರ ಜೂನ್‌ವರೆಗೆ ಬರುವ ದಿನಗಳೆಲ್ಲಾ ಬೇಸಿಗೆ ಕಾಲವೇ ಆಗಿರುತ್ತದೆ. ಆರಂಭದಲ್ಲಿ ಬೇಸಿಗೆ ಸಾಧಾರಣವಾಗಿ ಕಂಡು ಬಂದರೂ ಬರು ಬರುತ್ತಾ ತೀವ್ರವಾಗಿ ಬಿಸಿಲಿನ ಝಳ ಎಲ್ಲರನ್ನೂ ಬಾಧಿಸುತ್ತದೆ.

ಬಿರು ಬಿಸಿಲಿನ ಶಾಖಕ್ಕೆ ಕೆರೆ–ಕಟ್ಟೆಗಳು, ಹಳ್ಳ–ಕೊಳ್ಳಗಳಲ್ಲಿ ನೀರು ಬತ್ತಿ ಹೋಗುತ್ತದೆ. ಇದರ ಪರಿಣಾಮವಾಗಿ ಕುಡಿಯುವ ನೀರಿನ ಕೊರತೆ ಕಂಡುಬರುತ್ತದೆ. ನೀರಿಗಾಗಿ ಎಷ್ಟೋ ಕಡೆ ಪರದಾಡುವ ಸಂದರ್ಭವೂ ಎದುರಾಗುತ್ತದೆ.

ಜಲಾಶಯಗಳಲ್ಲಿ ನೀರಿನ ಕೊರತೆ ಉಂಟಾದಾಗ ಸಹಜವಾಗಿಯೇ ವಿದ್ಯುತ್ ಉತ್ಪಾದನೆ ಕುಂಠಿತಗೊಳ್ಳುತ್ತದೆ. ಈ ಸಂದರ್ಭ ವಿದ್ಯುತ್ ಸರಬರಾಜು ಸಿಬ್ಬಂದಿ ಹಾಗೂ ಅಧಿಕಾರಿಗಳಿಗೆ ಸವಾಲಾಗಿ ಪರಿಣಮಿಸುತ್ತದೆ. ಲಭ್ಯವಿರುವ ವಿದ್ಯುತ್ತನ್ನು ಸರಿದೂಗಿಸಿ ಸರಬರಾಜು ಮಾಡುವ ಜವಾಬ್ದಾರಿ ನಮ್ಮ ಮೇಲೆ ಇದೆ. 'ಬೆಸ್ಕಾಂ' ಅಧಿಕಾರಿಗಳು ಹಾಗೂ ನೌಕರರು ಈ ನಿಟ್ಟಿನಲ್ಲಿ ಸಾಮಾಜಿಕ ಕಾಳಜಿಯಿಂದ ಒಟ್ಟಾಗಿ ಕಾರ್ಯ ನಿರ್ವಹಿಸುವುದು ಅನಿವಾರ್ಯ.

ಸಾರ್ವಜನಿಕರ ದೂರುಗಳನ್ನು ಸಹನೆಯಿಂದ ಆಲಿಸಿ ಅದಕ್ಕೆ ಪರಿಹಾರ ದೊರಕಿಸುವುದು ನಮ್ಮ ಜವಾಬ್ದಾರಿ. ಇದನ್ನು ಗಮನದಲ್ಲಿಟ್ಟು ತಾವೆಲ್ಲರೂ ಕಾರ್ಯೋನ್ಮುಖರಾಗಬೇಕೆಂಬುದು ನನ್ನ ಮನವಿ. ಗ್ರಾಹಕರ ಸಮಸ್ಯೆಗಳಿಗೆ ಸ್ಪಂದಿಸುವುದೇ ನಮ್ಮ ಆದ್ಯ ಕರ್ತವ್ಯ.

ಹಿಂದಿನ ವರ್ಷಗಳಲ್ಲಿ ಯುಗಾದಿ ಹಬ್ಬದ ಆಸುಪಾಸಿನಲ್ಲಿ ಬೇಸಿಗೆಯ ಬಿರು ಮಳೆ ಗುಡುಗು–ಸಿಡಿಲಿನಿಂದ ಕೂಡಿ ಧರೆಗೆ ಸುರಿಯುತ್ತಿತ್ತು.

ಆಗ ಭೂಮಿ ತಂಪಾಗುವುದರಿಂದ ನೀರಾವರಿ ಪಂಪ್‌ಸೆಟ್‌ಗಳ ಬಳಕೆ ಸಾಕಷ್ಟು ಕಡಿಮೆಯಾಗುತ್ತಿತ್ತು. ಅಲ್ಲಿ ಬಳಕೆಯಾಗುತ್ತಿದ್ದ ವಿದ್ಯುತ್ತನ್ನು ಬೇರೆ ರೀತಿಯಲ್ಲಿ ಗ್ರಾಹಕರಿಗೆ ಒದಗಿಸಲು ಸಾಧ್ಯವಾಗುತ್ತಿತ್ತು.

ಈಗ ಬೇಸಿಗೆಯಲ್ಲಿ ಬೀಳುವ ಮಳೆಯ ಪ್ರಮಾಣ ಕೂಡ ಕಡಿಮೆಯಾಗಿದೆ. ಹಾಗಾಗಿ ರೈತರು ಬೇಸಿಗೆಯಲ್ಲಿ ಬೆಳೆದ ಬೆಳೆಗಳಿಗೆ ಪಂಪ್‌ಸೆಟ್ ಮೂಲಕ ನೀರು ಹರಿಸಲೇಬೇಕಾಗುತ್ತದೆ. ಅವುಗಳಿಗೆ ಅಗತ್ಯವಿರುವಷ್ಟು ವಿದ್ಯುತ್ ಸರಬರಾಜು ಮಾಡುವ ಜವಾಬ್ದಾರಿ ನಮ್ಮ ಮೇಲಿದೆ.

ಈ ಅಂಶಗಳನ್ನೆಲ್ಲ ಗಮನದಲ್ಲಿಟ್ಟುಕೊಂಡು ಸಿಬ್ಬಂದಿ ಮತ್ತು ಅಧಿಕಾರಿವರ್ಗ ಕಾರ್ಯನಿರ್ವಹಿಸುವ ಮೂಲಕ ಜನರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಒದಗಿಸಬೇಕು.

ಚೈತ್ರ ಮಾಸದ ಮೂಲಕ ಹೊಸ ಸಂವತ್ಸರ ಕಾಲಿಟ್ಟಿದೆ. ತಮಗೆಲ್ಲರಿಗೂ ವಿಳಂಬಿ ನಾಮ ಸಂವತ್ಸರದ ಹಾರ್ದಿಕ ಶುಭಾಶಯಗಳು.

ಸಂಪಾದಕಿ
**ಎನ್. ಜಯಂತಿ**
ಪ್ರಧಾನ ವ್ಯವಸ್ಥಾಪಕರು(ಗ್ರಾ & ಸಂ), ಬೆಸ್ಕಾಂ

# “ಬೆಳಕು ಭವನ” – ಉದ್ಘಾಟನಾ ಸಮಾರಂಭ











ದಿನಾಂಕ 28.02.2018 ರಂದು ಬೆಳಿಗ್ಗೆ 10.30 ಕ್ಕೆ ಬೆಂಗಳೂರು ಕೆ. ಆರ್. ವೃತ್ತದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಬೆವಿಕಂ ನಿಗಮ ಕಛೇರಿಯ **“ಬೆಳಕು ಭವನ”** ಕಟ್ಟಡದ ಉದ್ಘಾಟನಾ ಸಮಾರಂಭವನ್ನು ಶ್ರೀ. ಡಿ. ಕೆ. ಶಿವಕುಮಾರ್, ಮಾನ್ಯ ಇಂಧನ ಸಚಿವರು ಉದ್ಘಾಟಿಸಿದರು.

# DAS ಕಾರ್ಯಾಚರಣೆ – ಉದ್ಘಾಟನಾ ಸಮಾರಂಭ













ಬೆಂಗಳೂರಿನ ಗ್ರಾಹಕರಿಗೆ ಉಂಟಾಗುವ ವಿದ್ಯುತ್ ಅಡಚಣೆಗಳನ್ನು ಕಡಿಮೆಗೊಳಿಸುವ ಹಾಗು ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಕೆಯನ್ನು ಒದಗಿಸುವ ಸಲುವಾಗಿ, 11 ಕೆವಿ ವಿತರಣಾ ಜಾಲವನ್ನು ಆಧುನೀಕರಿಸುವ ಉದ್ದೇಶದಿಂದ ಸ್ವಯಂಚಾಲಿತ ವಿತರಣಾ ವ್ಯವಸ್ಥೆಯ(DAS) ಕಾರ್ಯಾಚರಣೆಗಳನ್ನು ಮಾನ್ಯ ಇಂಧನ ಸಚಿವರಾದ ಶ್ರೀ. ಡಿ. ಕೆ. ಶಿವಕುಮಾರ್ ರವರು ಬೆಂಗಳೂರಿನ ಹೆಚ್.ಎಸ್.ಆರ್. ಲೇಔಟ್‌ನಲ್ಲಿರುವ ಡಾಸ್ ಕಛೇರಿಯಲ್ಲಿ ದಿನಾಂಕ 28.02.2018 ರಂದು ಉದ್ಘಾಟಿಸಿದರು. ಹಾಗೂ ಮಾಧ್ಯಮ ಮಿತ್ರರಿಗೆ ಯೋಜನೆಯ ಬಗ್ಗೆ ತಿಳಿಸಿ ಪ್ರಚಾರ ಮಾಡಲು ಕೋರಲಾಯಿತು.

**ಧ್ಯೇಯೋದ್ದೇಶಗಳು:**

- ಬೆವಿಕಂ ನ ಸ್ವಯಂಚಾಲಿತ ವಿದ್ಯುತ್ ವಿತರಣಾ ವ್ಯವಸ್ಥೆಯ ಕಾರ್ಯಾರಂಭದಿಂದ ಬೆಂಗಳೂರು ನಗರದ 11 ಕೆವಿ ವಿತರಣಾ ಜಾಲದ ವ್ಯವಸ್ಥೆಯ ಆಧುನೀಕರಣ ಮಾಡಲಾಗಿದೆ.
- ಬೆ.ವಿ.ಕಂ ನ ಗ್ರಾಹಕರಿಗೆ 11 ಕೆವಿ ವಿತರಣಾ ಜಾಲದ ವಿದ್ಯುತ್ ಕಡಿತದಿಂದಾಗುವ ಅಡಚಣೆಯ ಸಮಯವನ್ನು ಕಡಿಮೆಗೊಳಿಸುವ ಮೂಲಕ ವಿದ್ಯುತ್ ಸರಬರಾಜಿನ ವಿಶ್ವಾಸಾರ್ಹತೆಯನ್ನು ಉತ್ತಮಪಡಿಸುವುದು.
- ಬೆ.ವಿ.ಕಂ ನ ಸ್ವಯಂಚಾಲಿತ ವಿದ್ಯುತ್ ವಿತರಣಾ ವ್ಯವಸ್ಥೆಯ SCADA ಮತ್ತು DMS ಗಳಿಂದ 11 ಕೆವಿ ವಿತರಣಾ ಜಾಲದ ದೂರಸ್ಥ ನಿರ್ವಹಣೆ ಮಾಡಬಹುದಾಗಿದೆ.

# ವಿದ್ಯುತ್ ಸರಬರಾಜಿಗೆ ವಿತರಣಾ ಲೈಸೆನ್ಸ್‌ದಾರರ ಷರತ್ತುಗಳು

....ಮುಂದುವರಿದ ಭಾಗ

**8.10** ವಿದ್ಯುತ್ ಸಂಪರ್ಕಗೊಳಿಸಿದ ಯಾವುದೇ ಒಂದು ನಿರ್ದಿಷ್ಟ ಯಂತ್ರೋಪಕರಣ/ ಸಾಧನ ಸಾಮಗ್ರಿಯ ಸ್ಥಾಪಿತ / ಸಂಪರ್ಕಿತ ಸಾಮರ್ಥ್ಯವು ಒಪ್ಪಂದಿತ ಬೇಡಿಕೆಗಿಂತ ಅಧಿಕವಾಗಿರಕೂಡದು. ಅರ್ಜಿದಾರರು ಸರಬರಾಜು ಬಿಂದುವಿನಲ್ಲಿ ಸ್ಥಾಪಿಸಿರುವ ಮುಖ್ಯ ಪರಿವರ್ತಕಕ್ಕೆ ಈ ಷರತ್ತು ಅನ್ವಯಿಸುವುದಿಲ್ಲ. ಅರ್ಜಿದಾರರು ಬದಲಿ ಪರಿವರ್ತಕವನ್ನೂ ಸಹ ಒದಗಿಸಬಹುದು.

**8.11** ವಿದ್ಯುತ್ ಪರಿವೀಕ್ಷಕರು ನೀಡಿರುವ ಸ್ಥಾಪನದ ಅನುಮೋದನೆಯ ದೃಢೀಕರಣ ಪತ್ರದ ಪ್ರತಿಯನ್ನು ಹಾಗೂ ಸಾಧನ ಸಲಕರಣೆಗಳನ್ನು ಲೈಸೆನ್ಸುದಾರರು ಅಗತ್ಯಪಡಿಸಿರುವ ರೀತಿಯಲ್ಲಿ ಸ್ಥಾಪಿಸಿರುವುದರ ಬಗ್ಗೆ ಪರೀಕ್ಷಾ ದೃಢೀಕರಣ ಮತ್ತು ಕಾರ್ಯಾರಂಭಗೊಳಿಸಬಹುದೆಂಬ ದೃಢೀಕರಣವನ್ನು ಒದಗಿಸಿದ ನಂತರ ಅರ್ಜಿದಾರರ ಸ್ಥಾಪನಕ್ಕೆ ವಿದ್ಯುತ್ ಸರಬರಾಜು ಸೇವೆಯ ಸೌಲಭ್ಯವನ್ನು ನೀಡತಕ್ಕದ್ದು.

**8.12** ಎಚ್.ಟಿ / ಇ.ಎಚ್.ಟಿ ಸ್ಥಾಪನಗಳಲ್ಲಿ ಸರಾಸರಿ ವಿದ್ಯುತ್ ಕಾರಕಾಂಶ, ಬೇಡಿಕೆ ಮತ್ತು ವಿದ್ಯುತ್ ಬಳಕೆಯನ್ನು ದಾಖಲಿಸಲು ಲೈಸೆನ್ಸುದಾರರು ಸ್ಥಾಪನಕ್ಕೆ ಎಚ್.ಟಿ. ಎಲೆಕ್ಟ್ರಾನಿಕ್ ಮಾದರಿಯ ಟ್ರೈವೆಕ್ಟರ್ ಮಾಪಕ ಉಪಕರಣವನ್ನು ಅಳವಡಿಸತಕ್ಕದ್ದು.

**8.13** ಅರ್ಹ ಪ್ರವರ್ಗದ ಯಾವುದೇ ಗ್ರಾಹಕನಿಗೆ / ಅರ್ಜಿದಾರನಿಗೆ, ಅವರ ಇಚ್ಛೆಯಾನುಸಾರ ಸಮಯಾಧಾರಿತ ವಿದ್ಯುತ್ ದರದ ಸೌಲಭ್ಯವನ್ನು ವಿಸ್ತರಿಸತಕ್ಕದ್ದು.

**8.14 ಎಚ್.ಟಿ / ಇ.ಎಚ್.ಟಿ. ಗ್ರಾಹಕರು ತಮ್ಮ ಆವರಣದಲ್ಲಿ, ನಿರ್ಮಾಣದ ಕೆಲಸಗಳನ್ನೂ ಒಳಗೊಂಡಂತೆ ಸದುದ್ದೇಶದ ಬಳಕೆಗಾಗಿ, ಪ್ರಕರಣಕ್ಕೆ ಅನುಗುಣವಾಗಿ, ಒಪ್ಪಂದಿತ ಬೇಡಿಕೆ, ಅಥವಾ ಅನುಮತಿತ ಗರಿಷ್ಠ ಬೇಡಿಕೆ / ವಿದ್ಯುತ್ ಬಳಕೆ ಅರ್ಹತೆ ಪ್ರಮಾಣವನ್ನು ಮೀರದಂತೆ ವಿದ್ಯುತ್ ಬಳಸಬಹುದಾಗಿದೆ. ಅಂತಹ ಬಳಕೆಯು ದುರುದ್ದೇಶಪೂರಿತ ಬಳಕೆಯಾಗುವುದಿಲ್ಲ.**

**9.0 ವಾಣಿಜ್ಯ / ನಿವಾಸಿ ಕಟ್ಟಡ(ಗಳು) / ಸಂಕೀರ್ಣ(ಗಳು) / ಬಹುಮಹಡಿ ಕಟ್ಟಡ(ಗಳಿಗೆ) ಅನ್ವಯಿಸುತ್ತದೆ.**

(ಎ) ಕೋರಿತ ವಿದ್ಯುತ್ ಬೇಡಿಕೆ 25 ಕಿಲೋ ವ್ಯಾಟ್ ಅಥವಾ ಅಧಿಕವಾಗಿದ್ದರೆ ಅಥವಾ

(ಬಿ) ಕಟ್ಟಡದ ನಿರ್ಮಿತ ಪ್ರದೇಶ 500 ಚ.ಮೀಟರುಗಳಿಗಿಂತ ಹೆಚ್ಚಾಗಿದ್ದರೆ.

ಕಲಮು 4.00ರ ಅಡಿಯಲ್ಲಿ ವಿದ್ಯುತ್ ಸರಬರಾಜು ಏರ್ಪಾಡು ಮಾಡಲು ಸಾಮಾನ್ಯ ಕಾರ್ಯವಿಧಾನಗಳು ಮತ್ತು ಕ.ವಿ.ನಿ. ಆಯೋಗ (ವಿದ್ಯುತ್ ಸರಬರಾಜಿನ ವೆಚ್ಚಗಳ ವಸೂಲಿ) ನಿಬಂಧನೆಗಳು, 2004ರ ಅಡಿಯಲ್ಲಿನ ಅವಕಾಶಗಳು ಹಾಗೂ ಕಾಲಕಾಲಕ್ಕೆ ಇದರ ತಿದ್ದುಪಡಿಗಳು {ಅನುಬಂಧ–2} ಹಾಗೂ ಅವಕಾಶಗಳು ಅನ್ವಯಿಸುವೆಡೆಯಲ್ಲೆಲ್ಲಾ ಅರ್ಜಿದಾರರು ಮತ್ತು ಲೈಸೆನ್ಸುದಾರರು ಪಾಲಿಸತಕ್ಕದ್ದು.

**9.01** ಬಹುಮಹಡಿ ಕಟ್ಟಡ / ಸಂಕೀರ್ಣದ ಮಾಲೀಕರು / ಪ್ರವರ್ತಕರು / ಅನುಭೋಗದಾರರು, ವಿದ್ಯುತ್ ಸರಬರಾಜಿಗಾಗಿ ಕಲಮು 30.01ರ ಪ್ರಕಾರ ನೋಂದಾವಣಿ ಮತ್ತು ಕಾರ್ಯಪ್ರಕ್ರಿಯೆ ಶುಲ್ಕವನ್ನು ಲೈಸೆನ್ಸುದಾರರ ಸಂಬಂಧಿತ ವ್ಯಾಪ್ತಿಯ ಉಪವಿಭಾಗ ಕಚೇರಿಯಲ್ಲಿ ಪಾವತಿಸಿ ನಿಗದಿತ ನಮೂನೆಯ ಅರ್ಜಿಯನ್ನು ಭರ್ತಿ ಮಾಡಿ ಅರ್ಜಿಯನ್ನು ಕೆಳಕಂಡ ದಾಖಲೆಗಳ ಸಹಿತ ಸಲ್ಲಿಸತಕ್ಕದ್ದು :

1) ನಿರ್ಮಿತ ಕಟ್ಟಡದ ವಿಸ್ತೀರ್ಣವನ್ನೂ ತೋರಿಸಿರುವ, ಕಟ್ಟಡ / ಸಂಕೀರ್ಣದ ಮಂಜೂರಾದ ನಕ್ಷೆಯ ಪ್ರತಿ,

2) ಮಾಲಿಕತ್ವ / ಅಧಿಕಾರ ಪತ್ರ / ಅನುಭೋಗದಾರಿಕೆಯ ಪುರಾವೆ

3) ಅನ್ವಯಿಸುವೆಡೆ ನಕ್ಷೆಯ ಮಂಜೂರಾತಿ ಪಡೆಯಲು ಲೈಸೆನ್ಸುದಾರರಿಂದ ನೀಡಲ್ಪಟ್ಟ ನಿರಾಕ್ಷೇಪಣ ಪತ್ರ

4) ಕಟ್ಟಡವನ್ನು ಗುರುತಿಸಲು ಮಾರ್ಗ ಸೂಚಿ

**ಟಿಪ್ಪಣಿ:**

i) ಈಗಾಗಲೇ ವಿದ್ಯುತ್ ಸರಬರಾಜು ಇರುವ ಹಾಲಿ ಕಟ್ಟಡಗಳ ಪ್ರಕರಣಗಳಲ್ಲಿ, ಮಂಜೂರಾದ ನಕ್ಷೆಯು ಲಭ್ಯವಿಲ್ಲದಿದ್ದರೆ, ನೋಂದಾಯಿತ ವಾಸ್ತುಶಿಲ್ಪಿ ತಜ್ಞ / ಸಿವಿಲ್ ಇಂಜಿನಿಯರ್ ಅವರು ದೃಢೀಕರಿಸಿ ಅರ್ಜಿದಾರರು ಸಹಿ ಹಾಕಿರುವ ಕಟ್ಟಡ / ಸಂಕೀರ್ಣದ ಇಡೀ ಕಟ್ಟಡ ನಿರ್ಮಿತ ಪ್ರದೇಶವನ್ನು ತೋರಿಸಿರುವ ಕಟ್ಟಡ/ಸಂಕೀರ್ಣದ ನಕ್ಷೆಯನ್ನು ಸಲ್ಲಿಸತಕ್ಕದ್ದು.

ii) ಹೊಸ ಕಟ್ಟಡಗಳ ಪ್ರಕರಣಗಳಲ್ಲಿ, ಮಂಜೂರಾದ ನಕ್ಷೆಗೂ, ಕಟ್ಟಡ ನಿರ್ಮಾಣಕ್ಕೂ ವ್ಯತ್ಯಾಸವಿದ್ದರೆ, ವಾಸ್ತವಿಕತೆಯ ಪ್ರಕಾರ ವಾಸ್ತು ಶಿಲ್ಪ ತಜ್ಞರು/ಸಿವಿಲ್ ಇಂಜಿನಿಯರ್ ತಯಾರಿಸಿ, ಕಟ್ಟಡ ನಿರ್ಮಿತ ಪ್ರದೇಶವನ್ನು ತೋರಿಸಿರುವ/ತೋರಿಸುವ ನಕ್ಷೆಯೊಂದಿಗೆ, ನೋಂದಾಯಿತ ವಾಸ್ತುಶಿಲ್ಪ ತಜ್ಞರು/ಸಿವಿಲ್ ಇಂಜಿನಿಯರ್ ಅವರು ದೃಢೀಕರಿಸಿ ಅರ್ಜಿದಾರರು ಸಹಿ ಮಾಡಿರುವ ನಕ್ಷೆಯನ್ನು ಮಂಜೂರಾದ ನಕ್ಷೆಯೊಂದಿಗೆ ಸಲ್ಲಿಸತಕ್ಕದ್ದು.

iii) ಲೈಸೆನ್ಸುದಾರರು ಅನುಮೋದಿಸಿರುವ ಬಡಾವಣೆಯ ನಕ್ಷೆಯಲ್ಲಿ ಸೂಚಿಸಿರುವಂತೆ, ಲೈಸೆನ್ಸುದಾರರು ನಿರಾಕ್ಷೇಪಣ ಪತ್ರ ನೀಡುವ ಸಮಯದಲ್ಲಿ, ಪರಿವರ್ತಕವನ್ನು ಅಳವಡಿಸಲು ಅವರ ಆವರಣದಲ್ಲಿ ಉಚಿತ ಸ್ಥಳಾವಕಾಶ ಒದಗಿಸುವಿಕೆಯ ಷರತ್ತನ್ನು ಅರ್ಜಿದಾರರು ಉಲ್ಲಂಘಿಸತಕ್ಕದ್ದಲ್ಲ.

iv) ಮೇಲಿನ (i) ಮತ್ತು (ii) ರಲ್ಲಿ ಸೂಚಿಸಿರುವಂತೆ, ಇಡೀ ಕಟ್ಟಡದ ನಿರ್ಮಿತ ಪ್ರದೇಶವನ್ನು ತೋರಿಸುವ ಕಟ್ಟಡ/ಸಂಕೀರ್ಣದ ನಕ್ಷೆಯನ್ನು ಸಲ್ಲಿಸಲು ಅರ್ಜಿದಾರರು ವಿಫಲರಾದರೆ, ಅಂತಹ ಅರ್ಜಿಯನ್ನು ತಿರಸ್ಕರಿಸತಕ್ಕದ್ದು.

**9.02 ಪರಿವರ್ತಕವನ್ನು ಸ್ಥಾಪಿಸಲು ಸ್ಥಳಾವಕಾಶ**

ಕವಿನಿ ಆಯೋಗ (ವಿದ್ಯುತ್ ಸರಬರಾಜಿನ ವೆಚ್ಚಗಳ ವಸೂಲಿ) ನಿಬಂಧನೆಗಳು, 2004 ಮತ್ತು ಕಾಲಕಾಲಕ್ಕೆ ಇದರ ತಿದ್ದುಪಡಿಗಳು, ಇದರಲ್ಲಿ ನಿರ್ದಿಷ್ಟಪಡಿಸಿರುವಂತೆ, ಪರಿವರ್ತಕವನ್ನು ಸ್ಥಾಪಿಸಲು ಅರ್ಜಿದಾರರು ಸ್ಥಳಾವಕಾಶವನ್ನು ಒದಗಿಸತಕ್ಕದ್ದು.

**9.03 ಠೇವಣಿಗಳು**

ಅರ್ಜಿದಾರರು, ಅವರು ಕೋರಿರುವ ವಿದ್ಯುತ್ ಪ್ರಮಾಣಕ್ಕನುಗುಣವಾಗಿ ನಿಗದಿತ ಪ್ರಾರಂಭಿಕ ಭದ್ರತಾ ಠೇವಣಿ ಮತ್ತು ಮಾಪಕ ಭದ್ರತಾ ಠೇವಣಿಯನ್ನು ಪಾವತಿಸತಕ್ಕದ್ದು.

**9.04 ಸೆಲ್ಯುಲಾರ್ ದೂರಸಂಪರ್ಕ ಕೇಂದ್ರಗಳಿಗೆ ವಿದ್ಯುತ್ ಸರಬರಾಜು:**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬಿ.ಎಂ.ಆರ್.ಡಿ.ಎ. ವ್ಯಾಪ್ತಿಗೆ ಒಳಪಡುವ ಪ್ರದೇಶಗಳಲ್ಲಿ ಪ್ರತಿ ಕಿಲೋ ವ್ಯಾಟ್‌ಗೆ ರೂ.10,000/– ಹಾಗೂ ಉಳಿದ ಪ್ರದೇಶಗಳಲ್ಲಿ ಪ್ರತಿ ಕಿಲೋ ವ್ಯಾಟ್‌ಗೆ ರೂ.7,500/– ರಂತೆ ಸೇವಾ ಮಾರ್ಗದ ಶುಲ್ಕವನ್ನು ಪಾವತಿಸಿ ದೂರಸಂಪರ್ಕ ಕೇಂದ್ರಗಳು ವಿದ್ಯುತ್ ಸರಬರಾಜನ್ನು ಪಡೆದುಕೊಳ್ಳಲು ಅನುಮತಿಸಲಾಗಿದೆ.

ಕಟ್ಟಡದಲ್ಲಿ ಎಚ್.ಟಿ. ವಿದ್ಯುತ್ ಸರಬರಾಜು ಸೌಲಭ್ಯವಿದ್ದರೆ, ಅಂತಹ ಸೇವೆಗಳಿಗೆ ಉಪಮಾಪಕದ (ಟ್ರೈವೆಕ್ಟರ್ ಮಾಪಕ) ಮೂಲಕ ವಿದ್ಯುತ್ ಸರಬರಾಜು ನೀಡಲಾಗುವುದು ಮತ್ತು ಎಚ್.ಟಿ–2(ಬಿ) (ಎಚ್.ಟಿ.ವಾಣಿಜ್ಯ) ಪ್ರವರ್ಗದಲ್ಲಿ ಪರಿಗಣಿಸಿ ಬೇಡಿಕೆ ಶುಲ್ಕ ಮತ್ತು ವಿದ್ಯುತ್ ಬಳಕೆ ಶುಲ್ಕಗಳೆರಡನ್ನೂ ವಿಧಿಸಲಾಗುವುದು.

ಕಟ್ಟಡದಲ್ಲಿ ಎಲ್.ಟಿ. ವಿದ್ಯುತ್ ಸರಬರಾಜು ಸೌಲಭ್ಯವಿದ್ದರೆ, ಅಂತಹ ಸೇವೆಗಳಿಗೆ, ಕಟ್ಟಡದ ನೆಲಮಾಳಿಗೆಯಲ್ಲಿ ಅಳವಡಿಸಿರುವ ಸಾಮಾನ್ಯ ವಾಹಕ ವ್ಯೂಹದ ಸಂಪರ್ಕದಿಂದ ಮಾಪಕವನ್ನು ಅಳವಡಿಸಿ ವಿದ್ಯುತ್ ಸರಬರಾಜು ನೀಡಲಾಗುವುದು ಮತ್ತು ಎಲ್.ಟಿ–3 (ಎಲ್.ಟಿ.ವಾಣಿಜ್ಯ) ಪ್ರವರ್ಗದಲ್ಲಿ ಬಿಲ್ ಮಾಡಲಾಗುವುದು.

ಆದಾಗ್ಯೂ, ಇದನ್ನು ಕಲಮು 9.00 ರಿಂದ ಪ್ರತ್ಯೇಕವಾಗಿ ಪರಿಗಣಿಸಲಾಗುವುದು.

ಮುಂದುವರೆಯುವುದು....

# “ಸ್ಮಾರ್ಟ್ ಗ್ರಿಡ್ ಟೆಕ್ನಾಲಜೀಸ್ ಮತ್ತು ಸ್ಟ್ಯಾಂಡರ್ಡ್ಸ್” – ತಾಂತ್ರಿಕ ಸೆಮಿನಾರ್













11 ನೇ ಜುಲೈ 2017 ರಂದು ಬೆ.ವಿ.ಕಂ ವತಿಯಿಂದ “ಸ್ಮಾರ್ಟ್ ಗ್ರಿಡ್ ಟೆಕ್ನಾಲಜೀಸ್ ಮತ್ತು ಸ್ಟ್ಯಾಂಡರ್ಡ್ಸ್” ಎಂಬ ವಿಷಯದ ಬಗ್ಗೆ IEEE ರವರಿಂದ ತಾಂತ್ರಿಕ ಸೆಮಿನಾರ್ ಅನ್ನು ಏರ್ಪಡಿಸಲಾಗಿತ್ತು.

- ವೆಬ್ – ಆಧಾರಿತ ತಾಂತ್ರಿಕ ಚರ್ಚೆಗೆ ವೇದಿಕೆಯನ್ನು ಕಲ್ಪಿಸುವುದು.
- ವಿದ್ಯುತ್ ಇಂಜಿನಿಯರಿಂಗ್ ಕ್ಷೇತ್ರದಲ್ಲಿನ ತಂತ್ರಜ್ಞರ ಜೊತೆ ವಿವಿಧ ವಿಷಯಗಳ / ಅನುಭವಗಳ ವಿಚಾರ ವಿನಿಯಮ.
- ಇತ್ತೀಚಿನ ಆಧುನಿಕ ತಂತ್ರಜ್ಞಾನಗಳನ್ನೊಳಗೊಂಡ ಆವಿಷ್ಕಾರಗಳ ಬಗ್ಗೆ ಬೆಳಕು ಚೆಲ್ಲುವುದು.

ತಾಂತ್ರಿಕ ಸೆಮಿನಾರ್‌ನ ಜೊತೆಗೆ ಶ್ರೀ ಕೃಷ್ಣ ರಾಜೇಂದ್ರ, ನಿವೃತ್ತ ಅಧೀಕ್ಷಕ ಇಂಜಿನಿಯರ್ ರವರು ಬರೆದಿರುವ “ಮೀಟರ್ ಹಾಗೂ ರಕ್ಷಣೆ” ಕುರಿತಾದ ತಾಂತ್ರಿಕ ಕೈಪಿಡಿಯ ಬಿಡುಗಡೆ ಹಾಗೂ ಶ್ರೀ ಸಿಬಿಚೆನ್. ಕೆ. ಮ್ಯಾಥ್ಯೂ ರವರು ಬರೆದಿರುವ “When the boss is wrong” ಎಂಬ ಕೈಪಿಡಿಯ ಬಿಡುಗಡೆ ಮಾಡಲಾಯಿತು.

# Distribution Utility Meet - 2017














ವಿದ್ಯುತ್ ಕ್ಷೇತ್ರದಲ್ಲಿನ ಭವಿಷ್ಯದ ಬೇಡಿಕೆಗಳನ್ನು ಪೂರೈಸಲು ವಿದ್ಯುತ್ ಕ್ಷೇತ್ರದ ಹಲವಾರು ಸಮಸ್ಯೆಗಳ/ಸವಾಲುಗಳ, ಉತ್ತಮ ಅನುಷ್ಠಾನ/ಅಳವಡಿಕೆಗಳ ಕುರಿತಾದ ವಿಚಾರ ವಿನಿಮಯ ಮಾಡಿಕೊಳ್ಳಲು ಬೆ.ವಿ.ಕಂಪನಿಯು India Smart Grid Forum (ISGF), Institute of Electrical and Electronics Engineers (IEEE), The Electric Power Research Institute (EPRI) and Lawrence Berkeley National Laboratory (LBNL) ಗಳ ಸಹಯೋಗದೊಂದಿಗೆ "Distribution Utility Meet-2017" ಕಾರ್ಯಾಗಾರವನ್ನು ನವೆಂಬರ್ 29 ಮತ್ತು 30 ರಂದು ಹೋಟೆಲ್ ಶೆರಟಾನ್ ಗ್ರ್ಯಾಂಡ್, ಬೆಂಗಳೂರಿನಲ್ಲಿ ಏರ್ಪಡಿಸಿತ್ತು.

ಭವಿಷ್ಯದ ತಂತ್ರಜ್ಞಾನವನ್ನು ಅಳವಡಿಸಲು, ಬೆ.ವಿ.ಕಂಪನಿಯ ವತಿಯಿಂದ ಯುಎಸ್‌ಎ, ಕೆನಡಾ, ಯೂರೋಪ್, ದಕ್ಷಿಣ ಕೊರಿಯಾ ಮತ್ತು ಜಪಾನ್‌ನಿಂದಲೂ ಸಹ ಪ್ರಮುಖ Utilities ಗಳನ್ನು ಆಹ್ವಾನಿಸಿ ಪರಸ್ಪರರ ವಿಚಾರ ವಿನಿಮಯಕ್ಕೆ "Distribution Utility Meet - 2017" ಉತ್ತಮ ವೇದಿಕೆಯಾಗಿ ನಿರ್ಮಾಣವಾಗಿತ್ತು.

# ಮೊಬೈಲ್ ಆಪ್ – ಬೆಸ್ಕಾಂ ಮಿತ್ರ






ಬೆಸ್ಕಾಂ ತನ್ನ ಗ್ರಾಹಕ ಸಂಪರ್ಕವನ್ನು ಪ್ರಬಲಗೊಳಿಸಲು ದಿನಾಂಕ : 20–12–2017 ರಿಂದ ಮೊಬೈಲ್ ಆಪ್ – ಬೆಸ್ಕಾಂ ಮಿತ್ರವನ್ನು ಸಿದ್ಧಪಡಿಸಿದೆ. ಈ ಮೂಲಕ ಬೆಸ್ಕಾಂ ಗ್ರಾಹಕ ಸೇವೆಗಳು ಇನ್ನಷ್ಟು ಸುಲಭ ಹಾಗೂ ಹತ್ತಿರವಾಗುತ್ತಿವೆ.

ಮೊಬೈಲ್ ಆಪ್ ನಲ್ಲಿ ಕೆಳಕಂಡ ಸೌಲಭ್ಯಗಳು ಲಭ್ಯವಿರುತ್ತವೆ

**ಗ್ರಾಹಕರಿಗಾಗಿ:**

1) ಬೆಸ್ಕಾಂ ಬಗೆಗಿನ ಮಾಹಿತಿ–ಟಾರೀಫ್, ಕಚೇರಿಗಳ ವಿವರ ಯೋಜನೆಗಳು ಇತ್ಯಾದಿ.
2) ಒಂದು ಅಥವಾ ಹೆಚ್ಚಿನ ಸ್ಥಾವರಗಳಿಗೆ ನೋಂದಣಿ
3) ವಿದ್ಯುತ್ ಕಡತಗಳ ಬಗೆಗಿನ ಮಾಹಿತಿ
4) ಆನ್‌ಲೈನ್ ಬಿಲ್ ಪಾವತಿ
5) ವಿದ್ಯುತ್ ಬಳಕೆ, ಬಿಲ್ ಹಾಗೂ ಪಾವತಿಯ ಇತಿಹಾಸ
6) ದೂರು ನಿರ್ವಹಣೆ ಮತ್ತು ರೇಟಿಂಗ್ ವ್ಯವಸ್ಥೆ

**ಅಧಿಕಾರಿಗಳಿಗಾಗಿ :**

7) ಕಂದಾಯ ನಿರ್ವಹಣೆ
8) ದೂರು ನಿರ್ವಹಣೆ

### ಹುಟ್ಟುಹಬ್ಬದ ಶುಭಾಶಯಗಳು

2018ನೇ ವರ್ಷದ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳಿನಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ ಬೆಸ್ಕಾಂನ ಅಧಿಕಾರಿಗಳು / ಸಿಬ್ಬಂದಿಗಳಿಗೆ "ಬೆಸ್ಕಾಂ ಸ್ನೇಹಿ"ಯ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.

– ಸಂಪಾದಕೀಯ ಮಂಡಳಿ



### ಹಾರ್ದಿಕ ಬೀಳ್ಕೊಡುಗೆ

ಹತ್ತು ಹಲವು ವರ್ಷ ಸೇವೆ ಸಲ್ಲಿಸಿ ಬೆಸ್ಕಾಂನ ಏಳಿಗೆಗೆ ಶ್ರಮಿಸಿ 2018ನೇ ವರ್ಷದ ಏಪ್ರಿಲ್, ಮೇ ಹಾಗೂ ಜೂನ್ ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವ ಅಧಿಕಾರಿಗಳು/ಸಿಬ್ಬಂದಿಗೆ "ಬೆಸ್ಕಾಂ ಸ್ನೇಹಿ"ಯ ಹಾರ್ದಿಕ ಬೀಳ್ಕೊಡುಗೆ.

– ಸಂಪಾದಕೀಯ ಮಂಡಳಿ

# ಶೀಘ್ರ ವಿದ್ಯುತ್ ಸಂಪರ್ಕ ಯೋಜನೆ (ಸವಿ ಕಿರಣ)

## Fast Track New Connection

















ದಿನಾಂಕ 07–02–2018 ರಿಂದ ಬೆಂಗಳೂರು ವಿದ್ಯುತ್ ಸರಬರಾಜು ನಿಗಮ ನಿಯಮಿತದ ಬೆಂಗಳೂರು ಮಹಾನಗರ ಕ್ಷೇತ್ರ ವಲಯದ ಎಲ್ಲಾ ಉಪವಿಭಾಗಗಳಲ್ಲಿ, 7.5 ಕಿ.ವ್ಯಾ. ವರೆಗೆ ಗೃಹ ಬಳಕೆ (ಎಲ್.ಟಿ–2) ಮತ್ತು ವಾಣಿಜ್ಯ ಬಳಕೆ (ಎಲ್.ಟಿ–3) ಜಕಾತಿಯ ಹೊಸ ವಿದ್ಯುತ್ ಸಂಪರ್ಕಕ್ಕಾಗಿ **Fast Track Online** ಮುಖಾಂತರ ಅರ್ಜಿ ಸಲ್ಲಿಸುವ ಯೋಜನೆಯನ್ನು 3 ನೇ ಪೂರ್ವ ಉಪವಿಭಾಗದಲ್ಲಿ ಉದ್ಘಾಟಿಸಲಾಯಿತು.

- FTNC ಯೋಜನೆಯು online ಮತ್ತು offline ಮುಖೇನ ಎಲ್ಲಾ ಉಪವಿಭಾಗಗಳಲ್ಲಿ ಸಾರ್ವಜನಿಕರಿಗೆ ಕನಿಷ್ಠ ದಾಖಲಾತಿಯೊಂದಿಗೆ ಶೀಘ್ರ ವಿದ್ಯುತ್ ಸಂಪರ್ಕ, ಹೆಸರು ಬದಲಾವಣೆ ಮತ್ತು ಜಕಾತಿ ಬದಲಾವಣೆ ಸೇವೆಗಳನ್ನು ಒದಗಿಸುವ ಗ್ರಾಹಕ ಸ್ನೇಹಿ ಕೇಂದ್ರವಾಗಿರುತ್ತದೆ.
- ಹೊಸ ವಿದ್ಯುತ್ ಸಂಪರ್ಕದ ಜೊತೆ ಹೆಸರು ಬದಲಾವಣೆ, ಜಕಾತಿ ಬದಲಾವಣೆ, ಸಂಪರ್ಕಿತ ಲೋಡ್‌ನ ಹೆಚ್ಚಳ/ ಇಳಿಯುವಿಕೆ ಅರ್ಜಿಗಳ ಸೇವೆಗಳನ್ನು ಸಹ ನೋಂದಾವಣೆ ಹಾಗೂ ಅಗತ್ಯವಿರುವ ದಾಖಲಾತಿಗಳನ್ನು ಅಪ್‌ಲೋಡ್ ಮಾಡಿದ ನಂತರದ 24 ಗಂಟೆಗಳ ಒಳಗಾಗಿ ಒದಗಿಸಲಾಗುವುದು.
- ಗ್ರಾಹಕರು ಬೆಸ್ಕಾಂಗೆ ಪಾವತಿಸಬೇಕಾಗುವ (ಠೇವಣಿಗಳು, ನೋಂದಾವಣಿ ಶುಲ್ಕ, ಮಾಪಕ ಶುಲ್ಕ) ಒಟ್ಟು ಶುಲ್ಕಗಳ ಪೂರ್ಣ ಮಾಹಿತಿಯ ಪ್ರತಿಯನ್ನು ಸ್ಥಳದಲ್ಲೇ ಕೊಡಲಾಗುವುದು. SMS/E-mail ಮುಖೇನವು ಸದರಿ ಮಾಹಿತಿಯನ್ನು ಕಳುಹಿಸಲಾಗುವುದು.
- FTNC (ಸವಿ ಕಿರಣ) ಸೆಲ್‌ನ ಯೋಜನೆಯು ಶೀಘ್ರದಲ್ಲೇ ಬೆಂಗಳೂರು ಗ್ರಾಮೀಣ ಹಾಗೂ ಚಿತ್ರದುರ್ಗ ವಲಯಗಳ ಎಲ್ಲಾ ಉಪ ವಿಭಾಗಗಳಲ್ಲೂ ಸಹ ವಿಸ್ತರಿಸಲಾಗುವುದು.

ಸವಿ–ಕಿರಣ (FTNC ಸೆಲ್) ಯೋಜನೆಯು ಬೆ.ವಿ.ಕಂನ ಬೆಂಗಳೂರು ಮಹಾನಗರ ಕ್ಷೇತ್ರ ವಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ 49 ಉಪ ವಿಭಾಗಗಳಲ್ಲಿ ಅನುಷ್ಠಾನಗೊಂಡಿದ್ದು ಚಾಲ್ತಿಯಲ್ಲಿದೆ. ಈ ಸೆಲ್ ಅನ್ನು ನುರಿತ ಸಂಪನ್ಮೂಲಗಳಿಂದ ತರಬೇತಿ ಪಡೆದ ಸಿಬ್ಬಂದಿಗಳು ನಿರ್ವಹಿಸುತ್ತಿದ್ದು, ಗ್ರಾಹಕರ ಸೇವೆಗಳಿಗೆ ಅಗತ್ಯವಿರುವ ಸಂವಾದ / ಸಹಾಯಕ್ಕಾಗಿ ಲಭ್ಯವಿರುತ್ತಾರೆ. ಈ ಸೆಲ್‌ನಲ್ಲಿ ಗ್ರಾಹಕರ ಅನುಕೂಲಕ್ಕಾಗಿ ಒಂದು LED Display Unit ಸಹ ಲಭ್ಯವಿದೆ.

# ವಿದ್ಯುತ್ ವಾಹನ – ಉದ್ಘಾಟನೆ









ಕಡಿಮೆ ಇಂಧನ ವೆಚ್ಚ, ಪರಿಸರ–ಸ್ನೇಹಪರತೆ ಮತ್ತು ಕಡಿಮೆ ನಿರ್ವಹಣೆ ವೆಚ್ಚದ ಕಾರಣದಿಂದಾಗಿ ವಿದ್ಯುತ್ ವಾಹನಗಳು ಹೆಚ್ಚು ಜನಪ್ರಿಯವಾಗುತ್ತಿವೆ. ಬೆವಿಕಂ ನಲ್ಲಿ ಇಂತಹ ವಿದ್ಯುತ್ ವಾಹನಗಳ ಬಳಕೆಯನ್ನು ಅನುಷ್ಠಾನಗೊಳಿಸಿ ಹಂತ ಹಂತವಾಗಿ ವಿಸ್ತರಿಸಲು ಯೋಜನೆಯನ್ನು ಹಾಕಿಕೊಳ್ಳಲಾಗಿದೆ.

ದಿನಾಂಕ 19.02.2018 ರಂದು ಬೆವಿಕಂ ನ ನಿಗಮ ಕಛೇರಿಯಲ್ಲಿ ಮಾನ್ಯ ಇಂಧನ ಸಚಿವರು ಸುಮಾರು 10 ವಿದ್ಯುತ್ ವಾಹನಗಳು ಹಾಗು ವಿದ್ಯುತ್ ವಾಹನಗಳ ಚಾರ್ಜಿಂಗ್ ಕೇಂದ್ರವನ್ನು ಪ್ರಾರಂಭಿಸಿ ಉದ್ಘಾಟಿಸಿದರು.

# ಆರೋಗ್ಯವರ್ಧಕ ಬಾರ್ಲಿ




ಗೋಧಿಕಾಳಿನಂತೆ ಕಾಣುವ ಸೀಮೆ ಅಕ್ಕಿಯಂತಹ ಬಣ್ಣ ಹೊಂದಿರುವ ಬಾರ್ಲಿಯು ಆರೋಗ್ಯವರ್ಧಕ ಪದಾರ್ಥ, ಇದರಿಂದ ನೀರು ತಯಾರಿಸಿ ಕುಡಿಯಬೇಕು. ಬೇಸಿಗೆಯಲ್ಲಿ ದೇಹವನ್ನು ತಂಪಾಗಿಡಲು ಸಹಕರಿಸುತ್ತದೆ. ಬಾರ್ಲಿಯ ಸೇವನೆಯಿಂದ ದೇಹದ ಬೆವರು ಹೆಚ್ಚಿನ ಪ್ರಮಾಣದಲ್ಲಿ ಹೊರಹರಿಯಲು ನೆರವಾಗುತ್ತದೆ. ಬಾರ್ಲಿ ನೀರನ್ನು ಒಂದು ಸಲಕ್ಕೆ ಮಾಡಿಯೂ ಕುಡಿಯಬಹುದು ಅಥವಾ ಅಗತ್ಯವಿದ್ದಷ್ಟು ಪ್ರಮಾಣದಲ್ಲಿ ತಯಾರಿಸಿ ಫ್ರಿಜ್ಜಿನಲ್ಲಿ ಶೇಖರಿಸಿಟ್ಟುಕೊಂಡು ಪ್ರತಿದಿನ ಬಳಸಲೂಬಹುದು. ಒಂದು ಸಲದ ಉಪಯೋಗಕ್ಕೆ ಒಂದು ಲೋಟ ನೀರಿಗೆ ಎರಡು ದೊಡ್ಡ ಚಮಚದಷ್ಟು ಬಾರ್ಲಿಯನ್ನು ಸೇರಿಸಿ ಕುದಿಸಿ ಕುಡಿಯಬೇಕು.

**ಪ್ರಯೋಜನಗಳು:**

- **ಕೊಲೆಸ್ಟ್ರಾಲ್ ಪ್ರಮಾಣವನ್ನು ಕಡಿಮೆಗೊಳಿಸುತ್ತದೆ** : ಬಾರ್ಲಿ ನೀರಿನಲ್ಲಿ ಹೆಚ್ಚಿನ ನಾರಿನ ಅಂಶ ಇರುವುದರಿಂದ ಪಚನಕ್ರಿಯೆ ಮತ್ತು ರಕ್ತಸಂಚಾರ ಸುಗಮಗೊಳ್ಳುತ್ತದೆ. ಪರಿಣಾಮವಾಗಿ ರಕ್ತದಲ್ಲಿದ್ದ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆಯಾಗಿ ಹೃದಯಕ್ಕೆ ಹೆಚ್ಚಿನ ಒತ್ತಡ ನೀಡುವ ಅಗತ್ಯ ಕಡಿಮೆಯಾಗುತ್ತದೆ.
- **ಮಧುಮೇಹಿಗಳಿಗೂ ಉತ್ತಮವಾಗಿದೆ** : ಇದರಲ್ಲಿನ ಬೀಟಾಗ್ಲುಕಾನ್ ಆಹಾರದಲ್ಲಿರುವ ಗ್ಲುಕೋಸ್ ಸಕ್ಕರೆಯನ್ನು ರಕ್ತದಲ್ಲಿ ಸೇರಿಸುವ ಗತಿಯನ್ನು ನಿಧಾನಗೊಳಿಸುತ್ತದೆ. ಮಧುಮೇಹಿಗಳ ರಕ್ತದಲ್ಲಿ ಥಟ್ಟನೇ ಸಕ್ಕರೆಯ ಪ್ರಮಾಣ ಏರಿದರೆ ಅಪಾಯಕಾರಿಯಾದುದರಿಂದ ಬಾರ್ಲಿ ಮಧುಮೇಹಿಗಳ ರಕ್ತದಲ್ಲಿ ಸಕ್ಕರೆ ನಿಧಾನವಾಗಿ ಲಭ್ಯವಾಗುವಂತೆ ಮಾಡಿ ಮಧುಮೇಹಿಗಳಿಗೆ ಸೂಕ್ತವಾದ ಆಹಾರವಾಗಿದೆ.
- **ಅತಿಸಾರ ನಿಲ್ಲುತ್ತದೆ** : ಅತಿಸಾರದಿಂದ ಬಳಲುತ್ತಿರುವವರಿಗೆ ತಕ್ಷಣವೇ ಒಂದು ಲೋಟ ಬಾರ್ಲಿ ನೀರನ್ನು ಕುಡಿಸುವ ಮೂಲಕ ಅತಿಸಾರವನ್ನು ನಿಲ್ಲಿಸಬಹುದು, ಅಲ್ಲದೇ ಇದು ಜೀರ್ಣಕ್ರಿಯೆಯನ್ನು ಉತ್ತಮಗೊಳಿಸುತ್ತದೆ.
- **ಕಿಡ್ನಿ ಸ್ಟೋನ್ ಸಮಸ್ಯೆಗಳಿಗೆ ರಾಮಬಾಣ** : ಮೂತ್ರಪಿಂಡಗಳಲ್ಲಿ ಉತ್ಪತ್ತಿಯಾಗುವ ಕಲ್ಲುಗಳಿಗೆ ಆಹಾರದಲ್ಲಿರುವ ಲವಣಗಳು ಕಾರಣವಾಗಿದೆ. ಒಂದು ಚಿಕ್ಕ ಕಣದಿಂದ ಪ್ರಾರಂಭವಾಗುವ ಇವು ದಿನಗಳೆದಂತೆ ದೊಡ್ಡದಾಗುತ್ತಾ ಹೋಗುತ್ತವೆ. ಪ್ರತಿದಿನ ಬಾರ್ಲಿ ನೀರನ್ನು ಕುಡಿಯುವುದರಿಂದ ಈ ಕಲ್ಲುಗಳು ನಿಧಾನವಾಗಿ ಕರಗುತ್ತವೆ. ಪರಿಣಾಮವಾಗಿ ಮೂತ್ರಪಿಂಡಗಳ ಕಾರ್ಯಕ್ಷಮತೆ ಹೆಚ್ಚುತ್ತದೆ.

# ಏಪ್ರಿಲ್ 29 – ಬುದ್ಧ ಪೂರ್ಣಿಮ



ಪೂರ್ವ ಏಷಿಯಾ ಮತ್ತು ಆಗ್ನೇಯಾ ಏಷಿಯಾದ ದೇಶಗಳಲ್ಲಿ ಇಂದಿಗೂ ಬೌದ್ಧ ಧರ್ಮ ಜೀವಂತ ಧರ್ಮವಾಗಿದೆ. ಆದರೆ ಇದರ ಜನ್ಮ ಭೂಮಿಯಾದ ಭಾರತದಲ್ಲಿ ಮೂವತ್ತು ಲಕ್ಷಕ್ಕಿಂತ ಸ್ವಲ್ಪ ಹೆಚ್ಚೆನ್ನುವಷ್ಟು ಅನುಯಾಯಿಗಳಿದ್ದಾರೆ.

ಗೌತಮ ಬುದ್ಧ ಬೌದ್ಧಧರ್ಮದ ಸ್ಥಾಪಕ. ಇವನು ಕ್ರಿ. ಪೂ. 566ರಲ್ಲಿ ಶಾಕ್ಯ ವಂಶದ ರಾಜಮನೆಯಲ್ಲಿ ಜನಿಸಿದ. ತಂದೆ ಶುದ್ಧೋಧನ ಮಹಾರಾಜ ತಾಯಿ ಮಾಯಾದೇವಿ. ಹುಟ್ಟಿದಾಗ ತಂದೆ ಇವನಿಗೆ ಸಿದ್ಧಾರ್ಥನೆಂದು ಹೆಸರಿಟ್ಟರು. ಇವನು ತನ್ನ ಹದಿನಾರನೆ ವಯಸ್ಸಿನಲ್ಲಿ ಯಶೋಧರೆ ಎಂಬ ರಾಜವಂಶದ ಕುವರಿಯನ್ನು ಮದುವೆಯಾಗಿ ಹದಿಮೂರು ವರ್ಷಗಳ ಕಾಲ ಕೌಟುಂಬಿಕ ಜೀವನದ ಸುಖವನ್ನು ಅನುಭವಿಸಿದ. ಇವನಿಗೆ ರಾಹುಲ ಎಂಬ ಒಬ್ಬ ಮಗನಿದ್ದನು, ಒಮ್ಮೆ ಸಿದ್ಧಾರ್ಥ ಒಬ್ಬ ರೋಗಿ, ಮುಪ್ಪಡರಿದ ಒಬ್ಬ ವ್ಯಕ್ತಿ, ಒಂದು ಶವ ಇವನ್ನೆಲ್ಲ ಕಂಡು ಮಾನವನಿಗೆ ದು:ಖ ಅನಿವಾರ್ಯ, ಇದರಿಂದ ಪಾರಾಗುವ ದಾರಿ ಹುಡುಕಬೇಕು ಎಂದು ನಿರ್ಧರಿಸಿ ಜೀವನದಲ್ಲಿ ವಿರಕ್ತಿ ಹೊಂದಿದ. ತನ್ನ 29ನೇ ವಯಸ್ಸಿನಲ್ಲಿ ಹೆಂಡತಿ ಮಗನನ್ನು ತೊರೆದು ಭಿಕ್ಷುಕನಂತೆ ಅಲೆದಾಟದಲ್ಲಿ ತೊಡಗಿದ. ಕೆಲಕಾಲ ಒಬ್ಬ ಗುರುವಿನಲ್ಲಿ ಆಧ್ಯಾತ್ಮಿಕ ತರಬೇತಿಯನ್ನು ಪಡೆದ.

ಇವು ಯಾವುದರಿಂದಲೂ ಪ್ರಯೋಜನವಾಗದೆ ಬೋಧಿ ಎಂಬ ವೃಕ್ಷದ ಕೆಳಗೆ ಸತ್ಯದ ಸಾಕ್ಷಾತ್ಕಾರಕ್ಕಾಗಿ ದೃಢಚಿತ್ತನಾಗಿ ಧ್ಯಾನ ಮಾಡುತ್ತಾ ಕುಳಿತ. ಕಡೆಗೆ ಅವನಿಗೆ ಜ್ಞಾನೋದಯವಾಗಿ ದು:ಖದಿಂದ ಹೊರಬರಲು ಮಾರ್ಗವಿದೆ ಎಂಬುದನ್ನು ಕಂಡುಕೊಂಡ. ಸತ್ಯದ ಬೆಳಕು ಅವನಲ್ಲಿ ಮೂಡಿ ಬುದ್ಧನಾದನು. ಅವನಿಗೆ ಹಲವಾರು ಮಂದಿ ಶಿಷ್ಯರಾದರು. ಊರೂರು ತಿರುಗುತ್ತ ಸುಮಾರು ನಲವತ್ತೈದು ವರ್ಷಗಳ ಕಾಲ ಉಪದೇಶ ಮಾಡುತ್ತಾ 'ಏಷ್ಯಾದ ಬೆಳಕು' ಎನಿಸಿದ. ಸುಖದ ಮುಖ್ಯ ತತ್ವಗಳನ್ನು ಮಾನವರಿಗೆಲ್ಲ ತಿಳಿಸಿಕೊಟ್ಟು ಉಪಕಾರ ಮಾಡಿದ. ಎಲ್ಲರಿಗೂ ತಿಳಿಯುವ ಪಾಳಿ ಭಾಷೆಯಲ್ಲಿ ಬೋಧಿಸಿದ. ಕ್ರಿ.ಪೂ. 486ರಲ್ಲಿ ಬುದ್ಧ ನಿರ್ವಾಣ ಹೊಂದಿದ.

ಆಸೆಯೇ ದು:ಖಕ್ಕೆ ಮೂಲ ಎಂಬುದು ಬುದ್ಧನ ಉಪದೇಶ.

# ಇಂಧನ ಇಲಾಖೆ : ಬಜೆಟ್ ಮುಖ್ಯಾಂಶಗಳು

### ಕಳೆದ ಐದು ವರ್ಷಗಳ ಸಾಧನೆಗಳು:

- 2008 ರಿಂದ 2013ರವರೆಗೆ 5361 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಮಾತ್ರ ಹೆಚ್ಚಿಸಲಾಗಿದ್ದು, ನಮ್ಮ ಸರ್ಕಾರದ ಅವಧಿಯಲ್ಲಿ 9,439 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ ಜಾಲಕ್ಕೆ ಸೇರ್ಪಡೆಗೊಳಿಸಲಾಗಿದೆ. ಇದರಲ್ಲಿ ನವೀಕರಿಸಬಹುದಾದ ಇಂಧನ ಮೂಲಗಳಿಂದ 5,092 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಒಳಗೊಂಡಿದೆ.
- 139 ಹೊಸ ಮತ್ತು 309 ಉನ್ನತೀಕರಿಸಿದ ಉಪಕೇಂದ್ರಗಳ ಸ್ಥಾಪನೆ ಮತ್ತು 3826 ಸರ್ಕ್ಯೂಟ್ ಕಿ.ಮೀ.ಗಳ ಪ್ರಸರಣ ಮಾರ್ಗ ರಚನೆಯಿಂದ ಪ್ರಸರಣಾ ಜಾಲದ ಸಾಮರ್ಥ್ಯ ಹೆಚ್ಚಿಸಲಾಗಿದೆ.
- 2008 ರಿಂದ 2013ರವರೆಗೆ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ 62,359 ಕೊಳವೆ ಬಾವಿಗಳ ವಿದ್ಯುದ್ಧೀಕರಣಗೊಳಿಸಲಾಗಿದ್ದು. ನಮ್ಮ ಸರ್ಕಾರದ ಅವಧಿಯಲ್ಲಿ 82,229 ಕೊಳವೆ ಬಾವಿಗಳನ್ನು ವಿದ್ಯುದ್ಧೀಕರಣಗೊಳಿಸಲಾಗಿದೆ. ಇದಲ್ಲದೇ, 47,293 ಕುಡಿಯುವ ನೀರಿನ ಘಟಕಗಳನ್ನು ಸಹ ವಿದ್ಯುದ್ಧೀಕರಣಗೊಳಿಸಲಾಗಿದೆ.
- ಅಡಚಣೆರಹಿತ ವಿದ್ಯುತ್ ಸರಬರಾಜಿಗಾಗಿ 184 ಟ್ರಾನ್ಸ್‌ಫಾರ್ಮರ್ ಬ್ಯಾಂಕ್ ಮತ್ತು 143 ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಗ್ರಾಹಕರ ಕುಂದು ಕೊರತೆಗಳ ನಿವಾರಣೆಗಾಗಿ 168 ಗ್ರಾಹಕರ ಸಲಹಾ ಸಮಿತಿಗಳನ್ನು ರಚಿಸಲಾಗಿದೆ.
- ಸಕ್ರಮಗೊಳಿಸಿದ 3,14,463 ನೀರಾವರಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಮೂಲ ಸೌಕರ್ಯ ಕಲ್ಪಿಸಲಾಗಿದೆ.
- ನಿರಂತರ ಜ್ಯೋತಿ ಯೋಜನೆಯಡಿ 2,131 ವಿದ್ಯುತ್ ಮಾರ್ಗಗಳನ್ನು ಬೇರ್ಪಡಿಸುವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.
- ಸೌರಶಕ್ತಿ ನೀತಿ 2014–2021ರ ಅಡಿ 2304 ಮೆಗಾವ್ಯಾಟ್ ಸೌರ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಸೇರ್ಪಡೆಗೊಳಿಸಿದೆ. ಇದರಲ್ಲಿ ಪಾವಗಡ ತಾಲ್ಲೂಕಿನ 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ಒಳಗೊಂಡಿದೆ.
- ಸೌರಶಕ್ತಿ ಯೋಜನೆಯಡಿ 1,161 ಸೌರ ಚಾಲಿತ ನೀರಾವರಿ ಪಂಪ್ ಸೆಟ್‌ಗಳನ್ನು ಫಲಾನುಭವಿಗಳಿಗೆ ಒದಗಿಸಲಾಗಿದೆ. ಸೂರ್ಯ ರೈತ ಯೋಜನೆಯಡಿ ಪ್ರಾಯೋಗಿಕವಾಗಿ 97.89 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಯೋಜನೆ ಅನುಷ್ಠಾನಗೊಳಿಸಲಾಗಿದೆ.
- ಹೊಸಬೆಳಕು ಯೋಜನೆಯಡಿ 1.84 ಕೋಟಿ ಎಲ್‌ಇಡಿ ಬಲ್ಬುಗಳನ್ನು, 2.39 ಲಕ್ಷ ಟ್ಯೂಬ್‌ಲೈಟ್‌ಗಳನ್ನು ಮತ್ತು 22 ಸಾವಿರ ಇಂಧನ ದಕ್ಷತೆಯುಳ್ಳ ಫ್ಯಾನ್‌ಗಳನ್ನು ಗ್ರಾಹಕರಿಗೆ ವಿತರಿಸಲಾಗಿದೆ.
- ನೀರಾವರಿ ಪಂಪ್ ಸೆಟ್‌ಗಳಿಗೆ ಮತ್ತು ಭಾಗ್ಯಜ್ಯೋತಿ/ ಕುಟೀರಜ್ಯೋತಿ ಸ್ಥಾವರಗಳಿಗೆ ಉಚಿತ ವಿದ್ಯುತ್ ಸರಬರಾಜುಗಾಗಿ 35,100 ಕೋಟಿಗಳ ರೂ. ಸಹಾಯ ಧನವನ್ನು ಒದಗಿಸಿದೆ.
- ಸರ್ಕಾರವು ವಿದ್ಯುಚ್ಛಕ್ತಿ ವಲಯದಲ್ಲಿ ವಿವಿಧ ಯೋಜನೆಗಳಿಗೆ ಬಂಡವಾಳವಾಗಿ ಸುಮಾರು 4,200 ಕೋಟಿ ರೂ. ಗಳನ್ನು ಬಿಡುಗಡೆ ಮಾಡಿದೆ.

### 2018–19ನೇ ಸಾಲಿನ ಹೊಸ ಯೋಜನೆಗಳು:

ಪ್ರತಿ ಸದಸ್ಯ ಹೊರೆ 10 ಹೆಚ್ ಪಿ ಮತ್ತು ಕಡಿಮೆ ಸಾಮರ್ಥ್ಯ ಹೊಂದಿದ ಸಹಕಾರ ಸಂಘಗಳ ಖಾಸಗಿ ಹೆಚ್‌ಟಿ ಮತ್ತು ಎಲ್‌ಟಿ ಸಮೂಹ ಏತ ನೀರಾವರಿ ಸ್ಥಾವರಗಳಿಗೆ 2018–19ನೇ ಸಾಲಿನಿಂದ ವಿದ್ಯುತ್ ಪೂರೈಕೆಯ ಮಿತಿ ಮತ್ತು ನಿಬಂಧನೆಗಳಿಗೆ ಒಳಪಟ್ಟು ಪ್ರತಿ ದಿನ 7 ಗಂಟೆಗಳ ವಿದ್ಯುತ್ ಬಳಕೆ ವೆಚ್ಚವನ್ನು ಬಳಕೆದಾರರಿಗೆ ಹಿಂಪಾವತಿ ಮಾಡಲಾಗುವುದು.

ಪ್ರಸರಣಾ ಜಾಲವನ್ನು ಬಲವರ್ಧನೆಗೊಳಿಸಲು 2018 – 19ನೇ ಸಾಲಿನಲ್ಲಿ ಯಾದಗಿರಿ ತಾಲ್ಲೂಕಿನ ರಾಮಸಮುದ್ರ, ರಾಯಚೂರಿನ ಯಾಪಲದಿನ್ನಿ, ಗಂಗಾವತಿಯ ಯರಡೋನ ಹಾಗೂ ಬೆನ್ನೂರು, ಕುಷ್ಟಗಿಯ ತಾವರಗೆರೆ, ಹಗರಿಬೊಮ್ಮನಹಳ್ಳಿಯ ಬಾಚಿಗೊಂಡನಹಳ್ಳಿ, ಮುದ್ದೇಬಿಹಾಳದ ತಾಳಿಕೋಟಿ, ಇಂಡಿಯ ರೋಡಗಿ (ಕೇಡಗಿ ಕ್ರಾಸ್), ಬಾದಾಮಿಯ ಹೆಬ್ಬಳ್ಳಿ, ಧಾರವಾಡದ ಗರಗ (ಶೇಡಬಾಲ್), ರೋಣದ ಬೆಳವಣಕಿ, ಮಂಗಳೂರಿನ ಮುಲ್ಕಿ, ಪುತ್ತೂರಿನ ಮಾಡಾವು, ಚನ್ನಗಿರಿ (ನಲ್ಲೂರು/ ಬೆಂಕಿಕೆರೆ) ಚಳ್ಳಕೆರೆಯ ವಿಶ್ವೇಶ್ವರಪುರ, ಮಧುಗಿರಿಯ ತೆರಿಯೂರು, ಕುಣಿಗಲ್‌ನ ತಿಪ್ಪೂರು, ಬಂಗಾರಪೇಟೆಯ ಟಿ. ಗೊಲ್ಲಹಳ್ಳಿ (ತಿಮ್ಮಸಂದ್ರ), ಆನೇಕಲ್‌ನ ಸಮಂದೂರು, ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೋರಮಂಗಲ, ಬೆಂಗಳೂರು ಪೂರ್ವ ತಾಲ್ಲೂಕಿನ ದೂರವಾಣಿನಗರ, ಹೊಸಕೋಟೆಯ ಮಂಡೂರು, ಚನ್ನಪಟ್ಟಣದ ಬಿ. ವಿ ಹಳ್ಳಿ, ಅರಕಲಗೂಡಿನ ರುದ್ರಪಟ್ಟಣ, ಕೆ. ಆರ್. ಪೇಟೆಯ ಗಂಗೇನಹಳ್ಳಿ (ಹರಿಯಲದಮ್ಮ ಟೆಂಪಲ್), ಮಂಡ್ಯದ ತುಂಬೆಕೆರೆ, ಪಿರಿಯಾಪಟ್ಟಣ ತಾಲ್ಲೂಕಿನ ಕಣಗಾಲು ಮತ್ತು ಕಿತ್ತೂರು, ಟಿ.ನರಸೀಪುರ ತಾಲ್ಲೂಕಿನ ಮಡವಾಡಿ (ಪರಿನಾಮಿಪುರ) ಹಾಗೂ ಮಲಿಯೂರು, ನಂಜನಗೂಡು ತಾಲ್ಲೂಕಿನ ಹೆಮ್ಮರಗಾಲ ಹಾಗೂ ಚಂದ್ರವಾಡಿ (ನಲ್ಲಿನಾಥಪುರ), ಗುಂಡ್ಲುಪೇಟೆಯ ಬಾರಗಿ, ಕೊಳ್ಳೆಗಾಲದ ಕೊತ್ತನೂರು ಹಾಗೂ ಚಾಮರಾಜನಗರದ ಬಡನಕುಪ್ಪೆ (ಕೆಐಎಡಿಬಿ ಕೈಗಾರಿಕಾ ವಲಯ) ಗಳಲ್ಲಿ 35 ವಿದ್ಯುತ್ ಉಪಕೇಂದ್ರಗಳನ್ನು ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮದ ಮೂಲಕ ಸ್ಥಾಪಿಸಲಾಗುವುದು.

2018–19ನೇ ಸಾಲಿನಲ್ಲಿ ಇಂಧನ ಇಲಾಖೆಗೆ ಒಟ್ಟಾರೆಯಾಗಿ 14,136 ಕೋಟಿ ರೂ.ಗಳನ್ನು ಒದಗಿಸಲಾಗಿದೆ.

# ಇವರು ನಮ್ಮ ಸಾಹಿತಿ



ಡಾ. ಎಂ.ಚಿದಾನಂದಮೂರ್ತಿ

ವಿದ್ವತ್ತು, ಸಂಶೋಧನೆ, ವಿಮರ್ಶೆ, ಚಿಂತನ – ಮಂಥನಗಳು ಮೇಳೈಸಿರುವ ನಾಡಿನ ಹಿರಿಯ ವಿದ್ವಾಂಸ ಡಾ. ಎಂ. ಚಿದಾನಂದಮೂರ್ತಿ.

ಚಿ.ಮೂ ಎಂದೇ ಹೆಸರಾಗಿರುವ ಅವರು ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕೋಗಲೂರಿನಲ್ಲಿ 1931ರ ಮೇ 10ರಂದು ಜನಿಸಿದರು. ಪ್ರಾಥಮಿಕ ಶಿಕ್ಷಣವನ್ನು ಕೋಗಲೂರಿನಲ್ಲಿ ಮುಗಿಸಿದ ಅವರು ಪ್ರೌಢ ಶಿಕ್ಷಣವನ್ನು ದಾವಣಗೆರೆಯಲ್ಲಿ ಮಾಡಿದರು.

ಕನ್ನಡ ಆನರ್ಸ್ ವಿದ್ಯಾರ್ಥಿಯಾಗಿ ಮೈಸೂರು ಮಹಾರಾಜ ಕಾಲೇಜಿಗೆ ಸೇರಿಕೊಂಡ ಅವರಿಗೆ ಕುವೆಂಪು, ಡಿ.ಎಲ್.ನರಸಿಂಹಾಚಾರ್, ತ.ಸು.ಶಾಮರಾವ್, ಎಸ್.ಶ್ರೀಕಂಠಶಾಸ್ತ್ರಿಗಳಂತಹ ಮಹಾನ್ ಸಾಹಿತಿಗಳ ಮಾರ್ಗದರ್ಶನದಿಂದಾಗಿ ಕನ್ನಡದ ಬಗ್ಗೆ ಅಪಾರ ಅಭಿಮಾನ ಬೆಳೆಯಿತು.

1953ರಲ್ಲಿ ಬಿ.ಎ., ಆನರ್ಸ್ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ಪಾಸಾಗಿ ಹಲವು ಪ್ರಶಸ್ತಿಗಳನ್ನು ಪಡೆದರು. ಆಗ ಬೆಂಗಳೂರಿನ ಇಂಟರ್ ಮೀಡಿಯಟ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿ ನಂತರ ತುಮಕೂರು ಕಾಲೇಜಿನಲ್ಲಿ ಕೆಲ ವರ್ಷಗಳ ಕಾಲ ಸೇವೆ ಸಲ್ಲಿಸಿದರು. ನಂತರ ಮೈಸೂರಿನಲ್ಲಿ ಎಂ.ಎ. ಪದವಿ ಪಡೆದಾಗ ಕುವೆಂಪು ಅವರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದರು, ತೀ.ನಂ.ಶ್ರೀಕಂಠಯ್ಯ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು.

1964ರಲ್ಲಿ ವೈವಾಹಿಕ ಜೀವನಕ್ಕೆ ಕಾಲಿಟ್ಟರು. ನಂತರ 1967–68ರ ಅವಧಿಯಲ್ಲಿ ಅಮೆರಿಕದ ಚಿಕಾಗೊ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ನಂತರ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ಸೇರಿಕೊಂಡ ಅವರು ಅಲ್ಲಿಯೇ ಪ್ರಾಧ್ಯಾಪಕರಾಗಿ ನಿವೃತ್ತಿ ಹೊಂದಿದರು.

1982ರಲ್ಲಿ ಗೋಕಾಕ್ ಚಳವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಕನ್ನಡ ಪರ ಕೆಲಸಗಳಿಗೆ ಒತ್ತಾಸೆ ನೀಡಿದರು. ನಂತರದ ದಿನಗಳಲ್ಲಿ ಕನ್ನಡ ಪರ ಚಟುವಟಿಕೆಗಳಿಗಾಗಿ "ಕನ್ನಡ ಕ್ರಿಯಾ ಸಮಿತಿ" ಯೊಂದನ್ನು ಸ್ಥಾಪಿಸಿ ಸಾಕಷ್ಟು ಹೋರಾಟದ ಕಾವನ್ನು ಸೃಷ್ಟಿಸಿದರು.

ಸಂಶೋಧನಾ ಕ್ಷೇತ್ರದ ದಿಗ್ಗಜರಾಗಿರುವುದರಿಂದ ಅವರ ಹೆಸರಿನಲ್ಲಿ "ಸಂಶೋಧನಾ" ಎಂಬ ಅಭಿನಂದನ ಗ್ರಂಥವನ್ನು ಹೊರತರಲಾಗಿದೆ. ಅವರ ಹೆಸರಿನಲ್ಲಿ "ಚಿದಾನಂದ" ಎಂಬ ಹೆಸರಿನಲ್ಲಿ ಸ್ಥಾಪಿಸಿರುವ ಪ್ರಶಸ್ತಿಯನ್ನು ಸಂಶೋಧಕರಿಗೆ ನೀಡಲಾಗುತ್ತಿದೆ.

ಚಿದಾನಂದಮೂರ್ತಿಯವರು ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿದ ಗ್ರಂಥ "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" ಒಂದು ಮಹತ್ವದ ಕೃತಿಯಾಗಿದೆ. ಭಾಷಾ ವಿಜ್ಞಾನಿಯಾಗಿರುವ ಅವರ "ಸಂಶೋಧನಾ ತರಂಗ" ಎಂಬ ವಿಮರ್ಶಾ ಗ್ರಂಥ ಹಾಗೂ ಕರ್ನಾಟಕ – ಕನ್ನಡ – ಕನ್ನಡಿಗ ಕೃತಿಗಳು ಸಂಶೋಧಕರಿಗೆ ಪ್ರಮುಖ ಗ್ರಂಥಗಳಾಗಿವೆ.

ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಹಾಗೂ 2002ನೇ ಸಾಲಿನ ಪಂಪ ಪ್ರಶಸ್ತಿಗಳು ಅವರಿಗೆ ಸಂದಿವೆ.


---

ಡಾ. ಎಸ್. ಎಲ್. ಭೈರಪ್ಪನವರು ಕನ್ನಡ ಕಾದಂಬರಿಕಾರರಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರುವಾಸಿಯಾಗಿದ್ದಾರೆ. ಇವರು ಹುಟ್ಟಿದ್ದು ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಸಂತೆಶಿವರ ಗ್ರಾಮದಲ್ಲಿ ತಂದೆ ಲಿಂಗಣ್ಣಯ್ಯ, ತಾಯಿ ಗೌರಮ್ಮ.

ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿ ಮುಗಿಸಿ, ಪ್ರೌಢಶಾಲೆಯಿಂದ ಮೈಸೂರಿನಲ್ಲಿ ಕಲಿತರು. ಮಹಾರಾಜ ಕಾಲೇಜಿನಲ್ಲಿ ತತ್ತ್ವಶಾಸ್ತ್ರದಲ್ಲಿ ಬಿ.ಎ. (ಆನರ್ಸ್), ಹಾಗೂ ಎಂ.ಎ ಪದವಿ ಪರೀಕ್ಷೆಯಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಪ್ರಥಮ ಸ್ಥಾನ ಪಡೆದು ಎರಡು ಸ್ವರ್ಣಪದಕಗಳನ್ನು ಗಳಿಸಿದರು.

ಬರೋಡದ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದಲ್ಲಿ "ಸತ್ಯ ಮತ್ತು ಸೌಂದರ್ಯ" ಮಹಾ ಪ್ರಬಂಧ ಮಂಡಿಸಿ 1962ರಲ್ಲಿ ಪಿಎಚ್.ಡಿ. ಪದವಿ ಪಡೆದರು. ಹುಬ್ಬಳ್ಳಿಯ ಕಾಡಸಿದ್ಧೇಶ್ವರ ಕಾಲೇಜಿನಲ್ಲಿ ತರ್ಕಶಾಸ್ತ್ರ ಮತ್ತು ಮನಃಶಾಸ್ತ್ರದ ಅಧ್ಯಾಪಕರಾಗಿ ಉದ್ಯೋಗ ಪ್ರಾರಂಭಿಸಿದ ಶ್ರೀಯುತರು ಗುಜರಾತಿನ ಸರ್ದಾರ್ ಪಟೇಲ್ ವಿಶ್ವವಿದ್ಯಾಲಯದಲ್ಲಿ ಆರು ವರ್ಷ ತತ್ತ್ವಶಾಸ್ತ್ರದ ಉಪನ್ಯಾಸಕರಾಗಿ, ನಂತರ ದೆಹಲಿಯ ರಾಷ್ಟ್ರೀಯ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ನಾಲ್ಕು ವರ್ಷ ಶಿಕ್ಷಣ ಮೀಮಾಂಸೆಯ ಪ್ರಾಧ್ಯಾಪಕರಾಗಿ 1991ರಲ್ಲಿ ನಿವೃತ್ತಿ ಹೊಂದಿದರು.

ಕಾಲೇಜು ವಿದ್ಯಾರ್ಥಿಯಾಗಿದ್ದಾಗಲೇ ಬರವಣಿಗೆಯ ಹವ್ಯಾಸವನ್ನು ರೂಢಿಸಿಕೊಂಡ ಡಾ. ಭೈರಪ್ಪನವರು ವಂಶವೃಕ್ಷ, ಧರ್ಮಶ್ರೀ, ಗೃಹಭಂಗ, ಪರ್ವ, ಮತದಾನ, ಜಲಪಾತ, ನಾಯಿನೆರಳು, ಭೀಮಕಾಯ, ದೂರಸರಿದರು, ತಬ್ಬಲಿಯು ನೀನಾದೆ ಮಗನೆ.. ಯಿಂದ ಹಿಡಿದು ಇತ್ತೀಚಿನ ಉತ್ತರಕಾಂಡ ದವರೆಗೆ ಹಲವಾರು ಶ್ರೇಷ್ಠ ಕಾದಂಬರಿಗಳನ್ನು ರಚಿಸಿದ್ದಾರೆ.



ಡಾ.ಎಸ್.ಎಲ್. ಭೈರಪ್ಪ

ಸಾಹಿತ್ಯ ವಿಮರ್ಶೆ, ಸೌಂದರ್ಯ ಮೀಮಾಂಸೆ ಮತ್ತು ಸಂಸ್ಕೃತಿಯ ಕುರಿತಾಗಿ 5 ಮೌಲಿಕ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರ ಆರು ಕಾದಂಬರಿಗಳು ಇಂಗ್ಲಿಷಿಗೆ ಅನುವಾದಗೊಂಡಿವೆ. ಭೈರಪ್ಪನವರ ಕಾದಂಬರಿಗಳು ಕರ್ನಾಟಕದ ಹಲವು ವಿಶ್ವವಿದ್ಯಾಲಯಗಳ ಪಠ್ಯಗಳಾಗಿ ಸ್ಥಾನವನ್ನು ಪಡೆದಿರುವುದಲ್ಲದೆ, 20ಕ್ಕೂ ಹೆಚ್ಚು ಸಂಶೋಧನಾ ವಿದ್ಯಾರ್ಥಿಗಳ ಅಧ್ಯಯನ ವಿಷಯವೂ ಆಗಿವೆ. ಶ್ರೀಯುತರು ಭಾರತೀಯ ಮತ್ತು ಪಾಶ್ಚಾತ್ಯ ಸಂಗೀತಾಸಕ್ತರಾಗಿರುವುದರೊಂದಿಗೆ ಚಿತ್ರ ಮತ್ತು ಶಿಲ್ಪಕಲೆಯಲ್ಲೂ ಅಭಿರುಚಿ ಹೊಂದಿದ್ದು, ಅಧಿಕಾರಯುತವಾಗಿ ಆ ಬಗ್ಗೆ ಬರೆದವರಾಗಿದ್ದಾರೆ.

ಇವರ ಸಾಹಿತ್ಯ ಕೃಷಿಗೆ ಸಂದ ಗೌರವ ಪ್ರಶಸ್ತಿಗಳು ಹಲವಾರು, ಪ್ರತಿಷ್ಠಿತ ಸರಸ್ವತಿ ಸಮ್ಮಾನ್ ಪ್ರಶಸ್ತಿ, ರಾಜ್ಯ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಗೌರವ, ಗ್ರಂಥಲೋಕ ಮತ್ತು ಗೊರೂರು ಪ್ರತಿಷ್ಠಾನ ವರ್ಷದ ವ್ಯಕ್ತಿ, ಮಾಸ್ತಿ ಸಾಹಿತ್ಯ ಪ್ರಶಸ್ತಿ, ಅ.ನ.ಕೃ ಪ್ರತಿಷ್ಠಾನ ಪ್ರಶಸ್ತಿ, ನಿರಂಜನ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮೈಸೂರು ಹಾಗೂ ಗುಲಬರ್ಗಾ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್, 68ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಸಾಹಿತ್ಯ ಅಕಾಡೆಮಿ ಫೆಲೋ ಗೌರವ, ಅಮೇರಿಕಾದ ಫೀನಿಕ್ಸ್‌ನಲ್ಲಿ ಜರುಗಿದ ವಿಶ್ವ ಕನ್ನಡ ಸಮ್ಮೇಳನದ ಅಧ್ಯಕ್ಷತೆ ಮುಖ್ಯವಾದುವುಗಳು. ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸ್ಥಾಪಿಸಿರುವ ಪ್ರತಿಷ್ಠಿತ ನೃಪತುಂಗ ಸಾಹಿತ್ಯ ಪ್ರಶಸ್ತಿಯನ್ನು 2017ರ ಸಾಲಿಗೆ ಡಾ. ಎಸ್. ಎಲ್. ಭೈರಪ್ಪ ಅವರಿಗೆ ನೀಡಿ ಗೌರವಿಸಿದೆ.

# ದಿನಾಂಕ 24-12-2017 ರಂದು ಬೆವಿಕಂನ ವತಿಯಿಂದ ಆಯೋಜಿಸಲಾಗಿದ್ದ ಪವರ್ ಮ್ಯಾರಥಾನ್


















## ಸಂಪಾದಕ ಮಂಡಳಿ

| | | |
|---|---|---|
| **ಶ್ರೀ ಪಿ. ರಾಜೇಂದ್ರ ಚೋಳನ್,** | ವ್ಯವಸ್ಥಾಪಕ ನಿರ್ದೇಶಕರು | **ಅಧ್ಯಕ್ಷರು** |
| **ಶ್ರೀ ಡಾ. ಆರ್.ಸಿ. ಚೇತನ್** | ನಿರ್ದೇಶಕರು (ಹಣಕಾಸು) | **ಮುಖ್ಯ ಸಂಪಾದಕರು** |
| **ಶ್ರೀ ಕೆ. ಸಿದ್ದರಾಜು,** | ನಿರ್ದೇಶಕರು (ತಾಂತ್ರಿಕ) | **ಮುಖ್ಯ ಸಂಪಾದಕರು** |
| **ಶ್ರೀಮತಿ. ಎನ್. ಜಯಂತಿ,** | ಪ್ರಧಾನ ವ್ಯವಸ್ಥಾಪಕರು(ಗ್ರಾ.ಸಂ) | **ಸಂಪಾದಕರು** |
| **ಶ್ರೀ ಎಸ್.ಕೆ. ನಾಗರಾಜ್,** | ನಿಗಮ ವ್ಯವಹಾರ (ಹಿರಿಯ ಸಹಾಯಕ) | **ಉಪ ಸಂಚಾಲಕರು** |
| **ಶ್ರೀ ಕೆ. ಬಲರಾಮ್,** | ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ | **ಸದಸ್ಯರು** |
| **ಶ್ರೀ ಎನ್. ಪ್ರಕಾಶ್ ಕುಮಾರ್,** | ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ | **ಸದಸ್ಯರು** |
| **ಶ್ರೀ ರಾಮಚಂದ್ರ ರೆಡ್ಡಿ,** | ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಎಚ್.ಆರ್. ರಾಜಕುಮಾರ್,** | ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಪ.ಜಾತಿ ಮತ್ತು ಪ.ಪಂಗಡ ಕ್ಷೇಮಾಭಿವೃದ್ಧಿ ಸಂಘ | **ಸದಸ್ಯರು** |
| **ಶ್ರೀ ಎಂ. ರವೀಂದ್ರ,** | ಕವಿಪ್ರನಿನಿ/ಎಸ್ಕಾಂಗಳ ಪ.ಜಾತಿ ಮತ್ತು ವರ್ಗದವರ ಅಧಿಕಾರಿಗಳ ಸಂಘ | **ಸದಸ್ಯರು** |
| **ಶ್ರೀ ಕುಮಾರ್ ಮುದ್ದವ್ವನವರ್,** | ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೊಮಾ ಇ. ಸಂಘ | **ಸದಸ್ಯರು** |

## ಮನವಿ

**ಬೆಸ್ಕಾಂ ಸ್ನೇಹಿ** ಗೃಹಪತ್ರಿಕೆಯಲ್ಲಿ ಪ್ರಕಟಣೆಗಾಗಿ ನಿಮ್ಮ ಅಭಿಪ್ರಾಯ, ಸಲಹೆ, ಲೇಖನ, ಕಛೇರಿಯಲ್ಲಿ ಏರ್ಪಡಿಸಿದ ಕಾರ್ಯಕ್ರಮ, ಸಮಾರಂಭಗಳ ಬಗ್ಗೆ ವರದಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರ ಸಾಧನೆಗಳ ಬಗ್ಗೆ ಮಾಹಿತಿಗಳನ್ನು ಕಳುಹಿಸಬೇಕಾದ

ವಿಳಾಸ: **ಪ್ರಧಾನ ವ್ಯವಸ್ಥಾಪಕರು (ಗ್ರಾ.ಸಂ.),ನಿಗಮ ಕಾರ್ಯಾಲಯ, ಬಿ.ವಿ.ಕಂಪನಿ, ಕೆ.ಆರ್. ವೃತ್ತ, ಬೆಂಗಳೂರು-560 001.**

ಇಮೇಲ್ ವಿಳಾಸ: **gmcr@bescom.co.in**

**ವಿದ್ಯುತ್ ಸಂಬಂಧಿತ ಯಾವುದೇ ಸಹಾಯಕ್ಕಾಗಿ 24 ಗಂಟೆಗಳ ಸಹಾಯವಾಣಿ: 1912**

**ಸಂದೇಶ ಕಳುಹಿಸಿ: 58888 ವೆಬ್‌ಸೈಟ್: www.bescom.org**

Printed at : Poornima Printers, Ph. 080 - 23359588